## ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

# ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ - 9

ಮತ್ತು

# ಕೃತಿ ಲೋಕಾರ್ಪಣೆ

**20 ಮೇ 2019 * ಸೋಮವಾರ * ಬೆಳಗ್ಗೆ 10.30**

ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮೈಸೂರು

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಅಧ್ಯಕ್ಷತೆ

**ಡಾ. ಜಿ. ಹೇಮಂತ ಕುಮಾರ್**

ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ

ದತ್ತಿ ಉಪನ್ಯಾಸ

**ಡಾ. ಗೀತಾ ಗೋಪಿನಾಥ್**

ಆರ್ಥಿಕ ಸಲಹೆಗಾರರು ಮತ್ತು ನಿರ್ದೇಶಕರು, ಸಂಶೋಧನಾ ವಿಭಾಗ

ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ, ವಾಷಿಂಗ್‌ಟನ್ ಡಿಸಿ, ಅಮೆರಿಕ

ವಿಷಯ

*ಜಾಗತೀಕರಣ - ಸವಾಲುಗಳು ಮತ್ತು ಸಹಕಾರದ ಅಗತ್ಯ*

ಕೃತಿ ಲೋಕಾರ್ಪಣೆ

**ಡಾ. ಕೆ.ಆರ್. ವೇಣುಗೋಪಾಲ್**

ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

*ಕೃತಿ : ಭಾರತ್ - ಗ್ಲೋಬಲ್ ಆ್ಯಂಬಿಷನ್ಸ್ ಅಂಡ್ ಲೋಕಲ್ ಚಾಲೆಂಜಸ್*

*ಲೇಖಕರು : ಶ್ರೀ ಎಸ್. ಗುರುಮೂರ್ತಿ*

ತಮಗೆ ಆತ್ಮೀಯ ಸ್ವಾಗತ



**ಡಾ. ಗೀತಾ ಗೋಪಿನಾಥ್**ರವರು ಪ್ರಖ್ಯಾತ ಇಂಡೋ-ಅಮೆರಿಕನ್ ಅರ್ಥಶಾಸ್ತ್ರಜ್ಞರಲ್ಲೊಬ್ಬರಾಗಿದ್ದಾರೆ. ಕೇರಳ ಮೂಲದ ಇವರು ಕೊಲ್ಕತಾದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮೈಸೂರಿನ ನಿರ್ಮಲ ಕಾನ್ವೆಂಟಿನಲ್ಲಿ ಪಡೆದರು. ದೆಹಲಿಯ ಲೇಡಿ ಶ್ರೀರಾಮ್ ಕಾಲೇಜಿನಿಂದ ಬಿ.ಎ. ಪದವಿಯನ್ನು, ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಎಂ.ಎ. (ಅರ್ಥಶಾಸ್ತ್ರ) ಪದವಿಯನ್ನು ಪಡೆದರು. ಬಳಿಕ ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಹಾಗೂ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಗಳಿಸಿದರು. ಪ್ರಿನ್ಸ್‌ಟನ್‌ನಲ್ಲಿ ಸಂಶೋಧನೆ ನಡೆಸುತ್ತಿದ್ದ ಅವಧಿಯಲ್ಲಿ ಅವರು ವುಡ್ರೋ ವಿಲ್ಸನ್ ರಿಸರ್ಚ್ ಫೆಲೊಶಿಪ್‌ಗೆ ಭಾಜನರಾದರು.

ಡಾ. ಗೀತಾರವರು ಪ್ರಸ್ತುತ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರತಿಷ್ಠಿತ ಜಾನ್ ಜ್ವಾನ್‌ಸ್ಟ್ರಾ ಅಂತಾರಾಷ್ಟ್ರೀಯ ಅಧ್ಯಯನ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ. ಅಮೆರಿಕದಲ್ಲಿರುವ ಇಂಟರ್ ನ್ಯಾಷನಲ್ ಮಾನಿಟರಿ ಫಂಡ್ ಸಂಸ್ಥೆಯ ಸಂಶೋಧನ ವಿಭಾಗದ ನಿರ್ದೇಶಕರು ಮತ್ತು ಆರ್ಥಿಕ ಸಲಹೆಗಾರರಾಗಿ, ನಿಯೋಜನೆಯ ಮೇಲೆ, ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನ್ಯಾಷನಲ್ ಬ್ಯೂರೋ ಆಫ್ ಎಕನಾಮಿಕ್ ರಿಸರ್ಚ್ ಸಂಸ್ಥೆಯ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಮ್ಯಾಕ್ರೊ-ಎಕನಾಮಿಕ್ ಪ್ರೋಗ್ರಾಂನ ಸಹನಿರ್ದೇಶಕರಾಗಿದ್ದಾರೆ. ಬಾಸ್ಟನ್ನಿನ ಫೆಡರಲ್ ರಿಸರ್ವ್ ಬ್ಯಾಂಕ್‌ನ ಸಂದರ್ಶಕ ವಿದ್ವಾಂಸರಾಗಿದ್ದಾರೆ. ನ್ಯೂಯಾರ್ಕ್‌ನ ಫೆಡರಲ್ ರಿಸರ್ವ್ ಬ್ಯಾಂಕ್‌ನ ಆರ್ಥಿಕ ಸಲಹಾಮಂಡಳಿಯ ಸದಸ್ಯರಾಗಿದ್ದಾರೆ. 45 ವರ್ಷ ವಯೋಮಾನದೊಳಗಿನ 25 ಜನ ಖ್ಯಾತ ಅರ್ಥಶಾಸ್ತ್ರಜ್ಞರ ಪೈಕಿ ಇವರೂ ಒಬ್ಬರು ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯು ಆಯ್ಕೆ ಮಾಡಿದೆ. ವರ್ಲ್ಡ್ ಎಕನಾಮಿಕ್ ಫೋರಂ ಇವರನ್ನು ಯುವ ವಿಶ್ವ ನಾಯಕಿ ಎಂದು ಪುರಸ್ಕರಿಸಿದೆ. ಇವರು ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್ ಮತ್ತು ಎಕನಾಮೆಟ್ರಿಕ್ ಸೊಸೈಟಿಗಳ ಫೆಲೋ (ಗೌರವ ಸದಸ್ಯ) ಆಗಿ ಚುನಾಯಿತರಾಗಿರುವ ಹೆಗ್ಗಳಿಕೆ ಹೊಂದಿದ್ದಾರೆ. ಭಾರತ ಸರ್ಕಾರವು ವಿದೇಶಿ ಭಾರತೀಯರಿಗೆ ನೀಡುವ ಅತ್ಯುತ್ತಮ ಪುರಸ್ಕಾರವಾದ 'ಪ್ರವಾಸಿ ಭಾರತೀಯ ಸಮ್ಮಾನ್' ಗೌರವಕ್ಕೆ ಪಾತ್ರರಾಗಿದ್ದಾರೆ. ಹಾಗೆಯೇ, ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದ 'ಪ್ರತಿಷ್ಠಿತ ವಿದ್ಯಾರ್ಥಿ' ಪುರಸ್ಕಾರವನ್ನು ಪಡೆದಿದ್ದಾರೆ. ಇವರನ್ನು ಜಗತ್ತಿನ ಅತ್ಯುತ್ತಮ ಚಿಂತಕರಲ್ಲೊಬ್ಬರೆಂದು 2019ರಲ್ಲಿ ಪರಿಗಣಿಸಲಾಗಿದೆ. ತಮ್ಮ ಎಡೆಬಿಡದ ಮತ್ತು ಅತ್ಯಂತ ಜವಾಬ್ದಾರಿಯ ಕಾರ್ಯಗೌರವಗಳ ನಡುವೆಯೂ 15 ಜನ ಸಂಶೋಧನ ವಿದ್ಯಾರ್ಥಿಗಳ ಪಿಎಚ್.ಡಿ. ಅಧ್ಯಯನಕ್ಕೆ ಮಾರ್ಗದರ್ಶನ ನೀಡಿರುವುದು ಅವರ ಅಪೂರ್ವ ಕಾರ್ಯಕ್ಷಮತೆಗೆ ಸಾಕ್ಷಿ. ಅರ್ಥಶಾಸ್ತ್ರದಲ್ಲಿ ಪ್ರಸಿದ್ಧ ಲೇಖಕರಾಗಿದ್ದು, ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಇವರ ಅಸಂಖ್ಯಾತ ಸಂಶೋಧನಾ ಲೇಖನಗಳು ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈ ವರ್ಷದ ಹ್ಯಾಂಡ್‌ಬುಕ್ ಆಫ್ ಇಂಟರ್‌ನ್ಯಾಷನಲ್ ಎಕನಾಮಿಕ್ಸ್ ಎಂಬ ಆಕರಗ್ರಂಥದ ಸಹ-ಸಂಪಾದಕರಾಗಿದ್ದಾರೆ. ರಿವ್ಯೂ ಆಫ್ ಎಕನಾಮಿಕ್ ಸ್ಟಡೀಸ್ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

### ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954 ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. ಇದರ ಆಶ್ರಯದಲ್ಲಿ ಇಂದು ಸುಮಾರು 300 ಕ್ಕೂ ಹೆಚ್ಚು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇದರ ಸುವರ್ಣ ಮಹೋತ್ಸವದ (2004) ನೆನಪಿನಲ್ಲಿ ಪ್ರತಿ ವರ್ಷವೂ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ. ಈ ಸುವರ್ಣ ಮಹೋತ್ಸವ ಮಾಲೆಯಡಿಯಲ್ಲಿ ಇದುವರೆಗೆ ಡಾ. ನಂದನ್ ಎಂ. ನಿಲೇಕಣಿ, ಡಾ. ಸ್ಯಾಮ್ ಪಿತ್ರೋಡ, ಡಾ. ಸಿ.ಎನ್.ಆರ್. ರಾವ್, ಸದ್ಗುರು ಜಗ್ಗಿ ವಾಸುದೇವ್‌ಜಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಡಾ. ಸುಧಾ ಮೂರ್ತಿ, ಡಾ. ಎ.ಎಸ್. ಕಿರಣ್‌ಕುಮಾರ್ ಹಾಗೂ ಶ್ರೀ ಎಸ್. ಗುರುಮೂರ್ತಿ - ಇವರುಗಳು ಉಪನ್ಯಾಸ ನೀಡಿದ್ದಾರೆ.